# ಸ್ಮರಣೆ ಒಂದೇ ಸಾಲದೆ ಗೋವಿಂದನ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru, page No. 70
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 573
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 45
4. Note: Lyrics given without highlights are as per Ref. 2. Lyrics given in yellow highlights are as per Ref. 1. The wordings in Ref. 3 are slightly different and are not considered here.
5. **Note:** Singer has followed lyrics as in Ref. 2.

| | |
|---|---|
| ರಾಗ: ಮಲಯಮಾರುತ ತಾಳ: ರೂಪಕ | ರಾಗ: ಕಲ್ಯಾಣಿ ತಾಳ: ಅಟ |
| | |
| ಸ್ಮರಣೆ ಒಂದೇ ಸಾಲದೆ ಗೋವಿಂದನ | ಸ್ಮರಣೆಯೊಂದೆ ಸಾಲದೆ ಗೋವಿಂದನ |
| ನಾಮ ಒಂದೇ ಸಾಲದೆ ॥ ಪ ॥ | ಸ್ಮರಣೆಯೊಂದೆ ಸಾಲದೆ |
| | |
| ಪರಮ ಪುರುಷನನ್ನು ನೆರೆ ನಂಬಿದವರಿಗೆ | ಪರಿಪರಿ ಸಾಧನ ಭ್ರಾಂತಿಯ ಬಿಡಿಸುವ |
| ದುರಿತ ಬಾಧೆಗಳ ಗುರುತು ತೋರುವುದೆ ॥ ಅಪ ॥ | ಪರಮಾತ್ಮನ ಪಾದ ನೆರೆನಂಬಿದವರಿಗೆ |
| | |
| ಕಡು ಮೂರ್ಖನಾದರೇನು ದುಷ್ಕರ್ಮದಿಂ | ಕಡು ಮೂರ್ಖನಾದರೇನು ದಾನ ಧರ್ಮ |
| ತೊಡೆದಾತನಾದರೇನು | ಕೊಡದಾತನಾದರೇನು |
| ಜಡನಾದರೇನಲ್ಪಜಾತಿಯಾದರೇನು | ಬಡವನಾದರೇನು ವಿಜಾತಿಯಾದರೇನು |
| ಬಿಡದೆ ಪ್ರಹ್ಲಾದನ್ನ ಸಲಹಿದ ಹರಿಯ ॥ ೧ ॥ | ಒಡನೆ ಪ್ರಹಲ್ಲಾದನುದ್ಧರಿಸಿದ ಶ್ರೀ ಹರಿಯ |
| | |
| ಪಾತಕಿಯಾದರೇನು ಸರ್ವಪ್ರಾಣಿ | ಪಾತಕಿಯಾದರೇನು ಸರ್ವ-ಲೋಕ |
| ಘಾತಕಿಯಾದರೇನು | ಘಾತಕಿಯಾದರೇನು |
| ನೀತಿಯ ಬಿಟ್ಟು ದುಷ್ಕರ್ಮಿಯಾದರೇನು | ಮಾತೆಯಂದದಿ ತನ್ನ ದಾಸರ ಸಲಹುವ |
| ಪ್ರೀತಿಯಿಂದಜಾಮಿಳನ ಸಲಹಿದ ಹರಿಯ ॥ ೨ ॥ | ಚೇತನಾತ್ಮಕ ಪಾದವ ನೆರೆನಂಬಿದವರಿಗೆ |
| | |
| ಸಕಲ ತೀರ್ಥಯಾತ್ರೆಯ ಮಾಡಿದಂಥ | ಪಾತಕ ವೆಗ್ಗಳವೊ, ನಾಮವು ಪ್ರಾಯ- |
| ನಿಖಿಲ ಪುಣ್ಯದ ಫಲವು | ಶ್ಚಿತ್ತಕೆ ವೆಗ್ಗಳವೊ |
| ಭಕುತಿ ಪೂರ್ವಕವಾಗಿ ಬಿಡದನುದಿನದಲ್ಲಿ | ಪಾತಕವೆನಗಿಲ್ಲ ಪ್ರಾಯಶ್ಚಿತ್ತ ಮುನ್ನಿಲ್ಲ |
| ಪ್ರಕಟ ಪುರಂದರ ವಿಠಲನ ನಾಮದ ॥ ೩ ॥ | ಏತರ ಭಯವಯ್ಯ ಪುರಂದರ ವಿಠ್ಠಲನ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಎಲ್ಲಾ ಧರ್ಮ ಸಾಧನೆಗಳಲ್ಲಿಯೂ ಶ್ರೀ ಹರಿ ನಾಮ ಸ್ಮರಣೆಯೆ ಶ್ರೇಷ್ಠ ಸಾಧನವೆಂದು ದಾಸರು ಸಾರಿದ್ದಾರೆ. ನಾಮ ಸ್ಮರಣೆಯಿಂದ ಜಾತಿ, ಪಂಥ, ಕುಲ, ಪಾಪ, ಮುಂತಾದವು ಯಾವ ಭೇದಗಳೂ ಉಳಿಯವೆಂಬುದು ದಾಸರ ಅಭಿಪ್ರಾಯ.

**ಚೇತನಾತ್ಮಕ** = ಚಿನ್ಮಯ, ಚಿತ್ ಸ್ವರೂಪ

**ವೆಗ್ಗಳ** = ಅತಿಶಯ

**ಪರಿಪರಿ ವಿಧವೆಲ್ಲ** – ಪ್ರಪಂಚದ ಹಲವು ಪ್ರಸಕ್ತಿಗಳೆಲ್ಲ.

**ನೆರೆನಂಬಿದವರಿಗೆ**– ಚೆನ್ನಾಗಿ (ಅನನ್ಯನೆಂದು) ಶ್ರದ್ಧೆಯಿಟ್ಟವರಿಗೆ.

**ಜಡನಾದರೇನು** – ಮೂರ್ಖನಾದರೇನು.

**Classification:** Keerthane
**Ankita:** purandara vittala
**Location:** NA
**Category:** Nama Smarane
**Sub-Category:** smarane, govinda, paramatma, murkha, dana, dharma, badava, kula, prahallada, Krishna, loka, tayi, bhaya, karma, prani, ajamila, punya, tirtha, phala,
**Pravachana:** NA
**Explanation:** NA